Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

# ಸತ್ಯವಾದಿ
SATYAVADI

ಸ್ಥಾಪಕರು— ಆಂಮನೆ ಸಿಂಸ್ಥೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

24—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

100 (2)

## ಮೂವರ ಕೊಲೆ

ಆಗ್ರಾದ ಒಳಿಯು ಬಿಜಿಪುರಿಯಿಂದ ಟುಂದಿರುವ ವಾರ್ತೆಯು ಪ್ರಕಾರ ಅಯು ಧಪಾಣಿ ಢಕಾಯಿತರು ಗ್ರಾಮ ಪ್ರಧಾನರ ಮನೆಗೆ ನುಗ್ಗಿ ಅವನ ತಂದೆ ಹಾಗೂ ಇಬ್ಬರು ಮಕ್ಕಳನ್ನು ಕೊಂದರು ಮತ್ತೊರ್ವನಿಗೆ ಗಾಯಮಾಡಿರವರು

## ಸ್ಪರ್ಧಿಸುವುದಿಲ್ಲ

ಚುನಾವಣೆಗೆ ಮುಂದೆ ತಮ್ಮ ಪಕ್ಷ ಸ್ಪರ್ದಿಸಕೂಡದೆಂದು ಯೊಚಿಸುತ್ತಿರುವ ದಾಗಿ ಪಬ್ಲಿಕನ್ ಪಕ್ಷದ ಅಧ್ಯಕ್ಷ ರಾಜ ಶ್ರೀ ಎನ್ ಶಿವಂತಜರು ರಾಬರ್ಟ ಸನ್‌ಪೇಟೆಯಲ್ಲಿ ತಿಳಿಸಿದ್ದಾರೆ

## ನಿಲ್ದಾಣದ ಅಭಿವೃದ್ಧಿ

ಮದ್ರಾಸಿನ ವಿಮಾನ ನಿಲ್ದಾಣದ ಅಭಿವೃದ್ಧಿಗೆ ರೂ 110 ಲಕ್ಷ ವೆಚ್ಚಮಾಡಲಾಗುವುದು

## ಹತ್ತು ವರ್ಷ ಬೇಕು

ಕಾಂಗ್ರೆಸು ಇನ್ನೂ 10 ವರ್ಷಗಳ ವರಿಗೆ ದೇಶವನ್ನು ಆಳಲೇ ಬೇಕು ಎಂದು ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್ ನಿಜೀವ ರೆಡ್ಡಿ ಬಳ್ಳಾರಿಯಲ್ಲಿ ತಿಳಿಸಿದರು

## ರಾಜೀನಾಮೆ

ಗವರ್ನರ್ ಜನರಲ್ ಸರ್ ಆಲೀ ಪರಂ ಗಣತಿಲಕೆಯವರ ಒಗ್ಗೆ ಬೇಗ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿರುವ ದಾಗಿ ಲಂಡನ್ನಿನ ಸಿಂಹಳದ ವೃತ್ತಿಗಳು ತಿಳಿಸಿವೆ ಗಣತಿಲಕೆಯವರನ್ನು ಏ ಚಾರ ಮಾಡದೆ ಪಿಕೂರಿಗಾರರು ಅವರ ಹೆಸರು ಉಪಯೋಗಿಸಿರುವರೆಂದು ವಂದಿ ಅವರ ಪೂರ್ಣ ಸಂಪಂತಾಧಿಯಾಗಿದ್ದರೂ ರಾಣಿಯ ಪ್ರತಿನಿಧಿ ಆಗಿರುವದಿಂದ ಅವನ್ನು ಪ್ರಶ್ನಿಸುವ ಮೊದಲು ಅವರು ರಾಜೀನಾಮೆ ಕೊಡಬೇಕು.

——

ಜಮ್ಮು ಚುನಾವಣೆಯಲ್ಲಿ ವಿರೋಧ ಪಕ್ಷಗಳು ಭಾಗವಹಿಸುವುವು.

## ಮಂತ್ರಿಗಳಿಗೆ ಶಿಕ್ಷಣ

ಬೇಗನೆ ಓದುವದಂಲ್ಲಿ ಬ್ರಿಟೀಷು ಲಾರ್ಡ್ ಪ್ರಿವಿ ಸೀಲ್ ಮತ್ತು ಡೆಪ್ಯುಟಿ ವಿದೇಶ ಮಂತ್ರಿ ಮತ್ತು 39 ಇತರ ವಿದೇಶಾಂಗ ಇಲಾಖೆ ಅಧಿಕಾರಿಗಳು 12ವಾರ ಶಿಕ್ಷಣ ಪಡೆಯುತ್ತಿರುವರೆಂದು ಲಂಡನ್ ವಾರ್ತೆ.

## ಹಿಂಸೆ ಸ್ಥಿತಿ

ತಸ್ಥ ಒಂದು ಲಾರಿಯನ್ನು ದಹನ ಮಾಡಲಾಯಿತೆಂದು, ಅಂಧೇರಿಯಲ್ಲಿ ಒಂದು ಲಾರಿಯನ್ನು ಅಕ್ರಮಣ ಮಾಡಿ ತೆಂದು ಕೃಪಾಲಿನಿ ಚುನಾವಣಾ ಸಮಿತಿ ವರದಿ ಮಾಡಿದ ವೇಲೆ ಉತ್ತರ ಬೊಂಬಾಯಿನ ಚುನಾವಣೆ ಹಿಂಸಾತ್ಮಕವಾಗಿ ಕಾಣುತ್ತಿದೆ

## ಅಮೆರಿಕದ ನೆರವು

ಐದು ಪಾಜೆಕ್ಟುಗಳ ನಿರ್ಮಾಣಕ್ಕೆ ಒಟ್ಟು 23-3 ಕೋಟಿ ಡಾಲರುಗಳ ನೆರವನ್ನು ಭಾರತ ಸರ್ಕಾರಕ್ಕೆ ಅಮೆರಿಕ ಕೊಡುವದೆಂದು ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಗಾಲ್ಬ್ರೈತ್ ನವ ದೆಹಲಿಯಲ್ಲಿ ತಿಳಿಸಿದರು.

## ಕೃಪಾಲಿನಿಗೆ ಬೆಂಬಲ

ಬೊಂಬಾಯಿನ ದ್ರವಿಡ ಮುನೇತ್ರ ಕಳಗಂ ಶಾಖೆ ಆಚಾರ್ಯ ಕೃಪಾಲಿನಿಯವರಿಗೆ ಬೆಂಬಲಿಸಬೇಕೆಂಬ ನಿರ್ಧಾರವನ್ನು ಮಾಡಿದೆ.

## ನಾಗಾಗಳ ದಾಳಿ

ಇಪ್ಪತ್ತು ನಾಗಾ ದಂಗೆಕೋರರು ಫುಲ್ಬರಿ ಪ್ರದೇಶದ ಗಾವ ಪ್ರಧಾನೋಧ್ವನ ಮನೆಯ ಮೇಲೆ ದಾಳಿ ಮಾಡಿ ಹಣ ಹಾಗೂ ಇತರ ಪದಾರ್ಥಗಳನ್ನು ಅಪಹರಿಸಿ ಪರಾರಿ ಆದರು

೦೦

ಬೊಂಬಾಯಿನ ಉತ್ತರ ಭಾಗದಲ್ಲಿ ಚುನಾವಣೆಯು ಬಿರುಸು ಬಲವಾಗಿದೆ

## ಲಂಚವಿತವರಿಗೆ ಓಟು ಕೊಡದಿರಿ

ಸ್ವತಂತ್ರ ಪಕ್ಷದ ನಾಯಕರಾದ ರಾಜಾಜಿಯವರು ಮೊನ್ನೆ ಕಂಚಿಪುರಂದಲ್ಲಿ ಭಾಷಣಮಾಡುತ್ತಾ, ಲಂಚ ಕೊಟ್ಟ ಉಮೇದವಾರರ ವಿರುದ್ಧ ಓಟು ಮಾಡುವ ಪ್ರತಿಜ್ಞೆಯನ್ನು ಓಟುದಾರರು ಮಾಡಿದರೆ, ಲಂಚ ಕೊಡುವವರಿಗೆ ಉಕ್ತವಾದ ಪಾಠ ಕಲಿಸದಂತಾಗುವುದು ಎಂದರು ಚುನಾವಣೆಯಲ್ಲಿ ಲಂಚ ಎಂದರೆ ಸೋಲು ಎಂಬುದನ್ನು 1962 ರ ಚುನಾವಣೆ ಪ್ರದರ್ಶಿಸಬೇಕು ಎಂದು ಅವರು ನುಡಿದರು ರಾಜಾಜಿಯವರು ಮಾತನಾಡುತ್ತಾ, ಹಾಲಿ ಚುನಾವಣೆ ಅಧಿಕಾರ ಮದದಿಂದ ಕೂಡಿಂವ ಕಾಂಗ್ರೆಸಿನ ಸರ್ವಾಧಿಕಾರ ಕೊನೆ ಮಾಡುವ ಆರಂಭವಾಗಿದೆ ಎಂದು ಕಾಂಗ್ರೆಸಿನ ಜಾತಕ ತೋರಿಸುವದಾಗಿ ಅವರು ತಿಳಿಸಿದರು.

## ಘರ್ಷಣೆ

ಖಟವಂಡುವಿನಿಂದ ಬಂದಿರುವ ವರದಿಯ ಪ್ರಕಾರ ಪೊಲೀಸರಿಗೂ ನಾಲ್ಕು ಗಂಟೆಗಳ ಹೊತ್ತು ಗುಂಡಿನ ಹೋರಾಟ ಈ ತಿಂಗಳಿನ 20 ರಂದು ಕ್ವೆಲಾಬಾವಾನಲ್ಲಿ ನಡೆಯಿತು ದಂಗೆಕೋರರು ವಾಕ್ಸಾದರು ಮತ್ತೊಂದು ವಾರ್ತೆಯ ಪ್ರಕಾರ ಒಬ್ಬ ಮಾಣಹೊಂದಿ ನಾಲ್ವರು ಗಾಯಗೊಂಡಿರುವರು ದಂಗೆಕಾರರು ತಮ್ಮ ಕರಬೇತಿ ಕೇಂದವನ್ನು ಬಲದಾಮಪುಂದಲ್ಲಿ ಹೊಂದಿರುವರೆಂದು ನೇಪಾಳದ ಅಧಿಕಾರಿಗಳು ಆರೋಪಿಸಿದ್ದಾರೆ.

### ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕೃಷ್ಣ ಜೋಯಿಸರಿಂದ

25 ಷಷ್ಠಿ ಸ್ವಾತಿ

## ನೇಪಾಳ ದೊರೆ ಆಗಮನ

ಒಳ ಬಿಕ್ಕಟ್ಟು ನುತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಖಂಡಿತವಾದ ಚರ್ಚೆ ಮಾಡಲು ನೇಪಾಳದ ದೊರೆ ಮಹೇಂದ್ರರು ಭಾರತಕ್ಕೆ ಮಾರ್ಚಿ 3 ನೆಯ ವಾರ ಬರುವರು ಎಂದು ನವ ದೆಹಲಿ ವಾರ್ತೆ.

## ದಂಡನೆ

ಪಾಕಿಸ್ತಾನದಿಂದ ಭಾರತಕ್ಕೆ ಅಗ ವಿಸಿದ ಅಧ್ಯುದ್ರೀಕ ಫಿಥಾ ಹುಸೇನ್ ಎಂಬ ಪಾಕಿಸ್ತಾನದವನು 21 ನೆಯ ತಾ|| ವೇಳೆಗೆ ವಾಪಸು ಆಗಬೇಕಾಗಿದ್ದುದನ್ನು ಉಲ್ಲಂಘನೆ ಮಾಡಿದುದಕ್ಕೆ ಮದ್ರಾಸು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು 6 ವಾರ ಕಠಿಣ ಸಜೆ ಮತ್ತು ರೂ 25 ದಂಡ ವಿಧಿಸಿದೆ ದಂಡ ಕೊಡದಿದ್ದರೆ ಒಂದು ವಾರ ಸಾದಾ ಸಜೆ ವಿಧಿಸಿದೆ.

## ಕುರ್ಚಿಯಲ್ಲಿ ಹಾವು

ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಅಟ್ಸ್ ಕಾಲೇಜಿನ ಪುರಾಪರಾದ ಶ್ರೀ ವಿ. ನಾಗರಾಜರಾಯರು ತಮ್ಮ ಕುರ್ಚಿಯಲ್ಲಿ ಕುಳಿತು ಕೊಳ್ಳುವದರಲ್ಲಿದ್ದಾಗ ಒಂದು ಹಾವು ಅಲ್ಲಿ ಇದ್ದುದನ್ನು ಕಂಡರು

## ಮಾತುಕತೆ

ಅಮೆರಿಕ ಅಧ್ಯಕ್ಷ ಕೆನೆಡಿಯವರ ವಿಶೇಷ ಪ್ರತಿನಿಧಿ ಚಸ್ಟರ್ ಬೌಲ್ಸ್ ನಿನ್ನೆ ಮುಧ್ಯಾಹ್ನ ಪ್ರಧಾನಿ ನೆಹರುರವರೊಡನೆ ನವ ದೆಹಲಿಯಲ್ಲಿ ಮಾತುಕತೆ ನಡೆಸಿದರು.

### ಉಪವಾಸ ವ್ರತ

ಅಪ್ಪಗ್ಯಕಯೋಗದ ಶಾಂತಿ ಮಾಡಿದ್ದಕ್ಕೆ 800 ಪುರೋಹಿತರ ಸಂಭಾವನೆ ಕೊಡಲಿಲ್ಲವೆಂದು ಉತ್ತರ ಬಂಗಾಳದ ಸಿಲ್ಗುರಿಯಲ್ಲಿ 9 ವಿದ್ವಾಂಸರು ಉಪವಾಸ ಮಾಡಿದ್ದಾರೆ.

## ಚುನಾವಣಾ ತುಣುಕು-ಮಿಣುಕು

★

ಕಾಂಗ್ರೆಸ್ಸುಪಕ್ಷದ ಲೋಕಸಭಾ ಸ್ಥಾನದ ಸ್ಪರ್ಧಿ ಶ್ರೀ ಹೆಚ್ ಸಿ ದಾಸಪ್ಪನವರು ತಮ್ಮ ಕ್ಷೇತ್ರದ ಚುನಾವಣೆ ಮೊನ್ನೆ ಮುಗಿದನಂತರ, ಹಾಸನದಲ್ಲಿ ವಿಧಾನಸಭಾ ಸ್ಥಾನಕ್ಕೆ ಸ್ಪರ್ಧಿಸಿರುವ ತಮ್ಮ ಪತ್ನಿ ಶ್ರೀ ಯಶೋಧಮ್ಮನವರಿಗೆ ಸಹಾಯ ಮಾಡಲು ಅಲ್ಲಿಗೆ ತೆರಳಿರುವರು : ಈ ಚುನಾವಣೆ ತಾ|| 25 ರಂದು ನಡೆಯಲಿದೆ.

ಕಡಪ— ನೂಥಾವರಂ ಗ್ರಾಮದಲ್ಲಿನ ಒಂದು ಪೋಲಿಂಗು ಬೂತಿನ ಹತ್ತಿರ ಇಬ್ಬರು ಹಿಂದಿನ ಮಾಕ್ಸ್ರಿಯಕ್ಕಾಗಿ ಗುಂಡಿನ ಹೊಡೆತಕ್ಕೆ ಆಹುತಿಯಾದರು; ಈ ಪೈಕಿ ಒಬ್ಬಳು ಹೆಂಗಸು — ಕಡಪ ಪಟ್ಟಣದಲ್ಲಿ 144 ನೇ ಸೆಕ್ಷನ್ ಉಲ್ಲಂಘಿಸಿ ಭರ್ಜಿಯನ್ನು ಹಿಡಿದಿದ್ದ ಒಬ್ಬನು ದಸ್ತಗಿರಿ ಮಾಡಲ್ಪಟ್ಟನು.

ಲಕ್ಕೂ — ಗೋಂಡಾ ಜಿಲ್ಲೆಯ ಬಲರಾಮಪುರದಲ್ಲಿ 17 ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ ; ಅಲ್ಲಿ ಕರ್ಫ್ಯೂ ಜಾರಿಯಲ್ಲಿದೆ ; ಇಲ್ಲಿ ಮೊನ್ನೆ ನಡೆದ ಚುನಾವಣಾ ಕಾಲದಲ್ಲಿ ಜನಸಂಘ ಮತ್ತು ಕಾಂಗ್ರೆಸ್ಸು ಕಾರ್ಯಕರ್ತರಲ್ಲಿ ಘರ್ಷಣೆಯಾಗಿ ಇಬ್ಬರು ಸತ್ತು 12 ಮಂದಿ ಗಾಯಗೊಂಡರು.

ಬೆಂಗಳೂರಿಗೆ 8 ಮೈಲಿ ದೂರದ ಸಾರಕ್ಕಿ ಗ್ರಾಮದ 105 ವರ್ಷದ ಭದ್ರಮ್ಮ ಎಂಬುವಳು, ಅವಳ ಮೊಮ್ಮಗ 58 ವರ್ಷ ವಯಸ್ಸಿನ ವ್ಯಕ್ತಿ ಮತ್ತು 7 ಮಕ್ಕಳ ತಂದೆಯ ಸಹಾಯದಿಂದ ಓಟುಮಾಡಿದಳು ; ಈ ಭದ್ರಮ್ಮನ ಮಾಡುವೆಯಲ್ಲಿ ಪ್ರಮುಖ ಅತಿಥಿಯಾಗಿದ್ದೆನೆಂದು ಹೇಳಿದ ನೂರು ವಯಸ್ಸಿನವನೊಬ್ಬನು ಓಟು ಮಾಡಿದನು

ನವದೆಹಲಿ — ಸೈನಿಕರು ಮತ್ತು ಅವರ ಸಂಸಾರಕ್ಕೆ ಮತನೀಡಲು ವಿಶೇಷ ಸೌಲಭ್ಯ ದೊರಕಿಸಿದ್ದರೂ ನಿರೀಕ್ಷಿಸಿರುವಷ್ಟು ಹೆಚ್ಚು ಮತ ಅತ್ತಕಡೆಯಿಂದ ದೊರೆಯುವಂತಿಲ್ಲವೆಂದು ಹೇಳಲಾಗಿದೆ.

ದಖ್ಖನಿನ ರಾಣಿ ಎಂದು ಖ್ಯಾತಿಪಡೆದಿರುವ ಪೂನಾದಲ್ಲಿ ಗೋಡೆಗಳು ಮತ್ತು ಕಡ್ಡಿಡಗಳು ಈ ಸಾರಿ ಚುನಾವಣಾಗುರುತುಗಳು ಮತ್ತು ಘೋಷಣೆಗಳ ಬರವಣಿಗೆಗಳಿಗೆ ತತ್ತಾಗಿಲ್ಲ.

ಭೂಪಾಲ್ 22— ಈ ಮಹಾಚುನಾವಣೆಯಲ್ಲಿ ಮಧ್ಯಪ್ರದೇಶದ ಶಾಸನಸಭೆಗೆ ಅವಿರೋಧವಾಗಿ ಚುನಾಯಿಸಲ್ಪಟ್ಟ ಶ್ರೀ ಹೀರಾ ಸಾ ಬುಧವಾರ ಆಸ್ಪತ್ರೆಯಲ್ಲಿ ಸತ್ತುಹೋದರೆಂದು ವಂದಿಯಾಗಿದೆ.

ಚಂಡೀಘರ— 15 ದಿವಸಗಳ ಹಿಂದೆ ಮಾಯವಾಗಿದ್ದ ಪಂಜಾಬು ಶಾಸನಸಭಾ ಸ್ವತಂತ್ರ ಸ್ಪರ್ಧಿ ಬಾಬು ಬಾಚನ ಸಿಂಗ್ ಪತ್ತೆಯಾದರು, 12 ದಿನಗಳಿಂದ ಫಿಲಿಬಟ್ಟನಲ್ಲಿ ಅವರ ಸಹೋದರರ ಮನೆಯಲ್ಲಿದ್ದರು.

ಫೆರೋಜಾಬಾದಿನಲ್ಲಿ ಸ್ತ್ರೀ ಮತದಾರರು ರಬ್ಬರು ಸ್ಟಾಂಪುಗಳಿಂದ ತಮ್ಮ ಹಣೆಗೆ 'ಬಿಂಡಿ' ಒತ್ತಿಕೊಂಡು ಮತದಾನ ಚೀಟಿಗಳನ್ನು ಹಾಗೇ ಬಿಟ್ಟು ಹೋದರು.

ಕೆಲ ಗ್ರಾಮಾಂತರಂಗಳಲ್ಲಿ ಅವಿದ್ಯಾವಂತ ಓಟರು ಮತದಾನ ಚೀಟಿ ಹೆಬ್ಬೆಟ್ಟು ಗುರುತು ಒತ್ತಿರುವರು.

ರಾಜಸ್ಥಾನದಲ್ಲಿ ಸುಮಾರು 50 ಮಂದಿ ಕುರುಡರೂ ದುರ್ಬಲರೂ ತೀವ್ರ ಜ್ವರದಿಂದ ನರಳಿತ್ತಿದ್ದವರೂ ಮತದಾನ ಮಾಡಿದರು.

ಮಂಡ್ಯದಲ್ಲಿ ನೂರು ವರ್ಷದ ಮಹಿಳೆಯೊಬ್ಬಳು ಮತ ನೀಡಿದಳು.

---

# Help ' The Gorakshana '

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ


# ವುಡ್‌ಲ್ಯಾಂಡ್ಸ್ ಜನಪ್ರಿಯತೆ 3 ನೇ ವಾರ

.... ಪಹಸ್ಸಗಟ್ಟಲೆ ಜನರು ನೋಡಿ ಆನಂದಿಸುತ್ತಿರುವ ಅವಿಸ್ಮರಣೀಯ ಚಿತ್ರವೈಭವ ....

## ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ- ಶಂಕರ್-ಜೈಕಿಶನ್ [ ದಿನವಹಿ 3 ಪ್ರದರ್ಶನಗಳು ]

---

## ಅಪೆರಾ — 23-2-62 ರಿಂದ

## ಮೋಹಿನಿ ರುಕ್ಮಾಂಗದ

[ ಏಕಾದಶಿ ಮಹಾತ್ಮೆ ] ( ಕನ್ನಡ )

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ ದಿನವಹಿ 3 ಆಟಗಳು ]

---

ಮೈಸೂರುನಗರ ( ದಕ್ಷಿಣ ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ ನ ಕ್ಷ ತ್ರ X ಹೀಗೆ ಸೀಲ್ ಹಾಕಿ

---

ಲೋಕಸಭೆ ಚುನಾವಣೆಗೆ ಮೈಸೂರು ಜಿಲ್ಲಾ ಕ್ಷೇತ್ರದಿಂದ ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿರುವ ನಕ್ಷತ್ರ ಗುರುತನ್ನುಳ್ಳ

## ಎಚ್. ರಾಮರಾಜ ಅರಸ್

ಇವರಿಗೆ ನಿಮ್ಮ ಪವಿತ್ರವಾದ ಓಟುಕೊಡಬೇಕಾಗಿ ವಿನಂತಿ

---

# SHAKTI SUDHA

## A Superb Tonic


Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.